ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, "ವಿಧಾನ ಪರಿಷತ್ತಿನಿಂದ ತಿರಸ್ಕೃತಗೊಂಡಿರುವ 2005ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪುನರ್ ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"2005ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪುನರ್ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಪುನರ್ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು: ಈಗ ಕಾರ್ಮಿಕ ಸಚಿವರಾದ ಶ್ರೀ ಇಕ್ಬಾಲ್ ಅನ್ಸಾರಿಯವರು ಸದಸ್ಯರ ಗೌರವಾರ್ಥ ಔತಣ ಕೂಟ ಏರ್ಪಾಡು ಮಾಡಿದ್ದಾರೆ. ಎಲ್ಲರೂ ಭಾಗವಹಿಸಬೇಕೆಂದು ಕೋರಲಾಗಿದೆ. ಸಭೆಯನ್ನು 3.00 ಗಂಟೆವರೆಗೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 7 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನಃ 3–30 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷರು (ಶ್ರೀ ಎನ್.ವೈ. ಗೋಪಾಲಕೃಷ್ಣರವರು) ಪೀಠವನ್ನು ಆಲಂಕರಿಸಿದರು)

8. ಗಮನ ಸೆಳೆಯುವ ಸೂಚನೆಗಳು

(ಅ) ವಿಷಯ: ಬಿಜಾಪುರ – ಗದಗ **ಬ್ರಾಡ್‌ಗೇಜ್ ಕಾಮಗಾರಿಗಳು ವಿಳಂಬವಾಗಿರುವ ಬಗ್ಗೆ.**

***

ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ): ಮಾನ್ಯ ಉಪಾಧ್ಯಕ್ಷರೆ, ಬಿಜಾಪುರ ಗದಗ ಬ್ರಾಡ್‌ಗೇಜ್ ಕಾಮಗಾರಿಗಳು ವಿಳಂಬವಾಗಿರುವ ಬಗ್ಗೆ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ, ಪ್ರವಾಸೋದ್ಯಮ ಮತ್ತು ಜವಳಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) (ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಪ್ರವಾಸೋದ್ಯಮ ಮತ್ತು ಜವಳಿ ಖಾತೆ ಸಚಿವರ ಪರವಾಗಿ): ಮಾನ್ಯ ಉಪಾಧ್ಯಕ್ಷರೆ,

ರೈಲ್ವೆ ಇಲಾಖೆಯ ಮಾಹಿತಿಯ ಪ್ರಕಾರ ಬಿಜಾಪುರದಿಂದ ಗದಗ್‌ವರೆಗಿನ ರೈಲ್ವೆ ಮಾರ್ಗವನ್ನು 98–99ರ ಸಾಲಿನಲ್ಲಿ ಪ್ರಾರಂಭಿಸಲಾಗಿದೆ. ಈ ಯೋಜನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಸಮವಾಗಿ ಹಂಚಿಕೆಯಾಗಿ ನಿಗಧಿಪಡಿಸಿದ ವೆಚ್ಚ ರೂ.178.72 ಕೋಟಿಗಳು, ಇದರಲ್ಲಿ ರಾಜ್ಯ ಸರ್ಕಾರದ ಪಾಲು 89.36 ಕೋಟಿಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ರೈಲ್ವೆ ಇಲಾಖೆ ತನ್ನ ದಿನಾಂಕ 7.7.2005ರ ಪತ್ರದಲ್ಲಿ ಈ ಯೋಜನೆಗೆ ನಿಗಧಿಪಡಿಸಿದ ವೆಚ್ಚದ ಅಂದಾಜು ರೂ.178.72 ಕೋಟಿಗಳಿಂದ ರೂ.250.00 ಕೋಟಿಗಳಿಗೆ ಹೆಚ್ಚಳವಾಗಿರುತ್ತದೆಂದು ತಿಳಿಸಿರುತ್ತಾರೆ. ಈ ವಿಷಯದಲ್ಲಿ ರಾಜ್ಯ ಸರ್ಕಾರವು ರೈಲ್ವೆ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಅಂತಿಮ ನಿರ್ಣಯ ತೆಗೆದುಕೊಳ್ಳಬೇಕಾಗಿದೆ.

ರಾಜ್ಯದ ಹೈಕೋರ್ಟಿನಲ್ಲಿ ರಿಟ್ ಅರ್ಜಿ ಸಂಖ್ಯೆ. 9379/2005 ರಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ ಈ ಯೋಜನೆಯನ್ನು ಅಂದರೆ ಬಿಜಾಪುರದಿಂದ ಬಾಗಲಕೋಟೆ ವರೆಗಿನ ಪರಿವರ್ತನಾ ಕಾಮಗಾರಿಯನ್ನು 30.03.2006 ರೊಳಗಾಗಿ ಪೂರ್ಣಗೊಳಿಸಿ ಪ್ರಯಾಣಿಕರಿಗೆ ರೈಲು ಸೇವೆಯನ್ನು ದಿನಾಂಕ 30.06.2006 ರೊಳಗಾಗಿ ನೈಋತ್ಯ ರೈಲ್ವೆ ಇವರು ನೀಡುವುದಾಗಿ ಹಾಗೂ ಗದಗ್‌ದಿಂದ ಬಾಗಲಕೋಟೆವರೆಗಿನ ಪ್ರಸ್ತುತ ಇರುವ ಮೀಟರ್ ಗೇಜ್ ಹಳಿಯನ್ನು ಕೀಳದೆ ಈ ಮಾರ್ಗದ ಗೇಜು ಪರಿವರ್ತನೆಯ ಕಾರ್ಯ ಪೂರ್ಣವಾಗುವವರೆಗೂ ಉಳಿಸಿಕೊಂಡು ನೈಋತ್ಯ ರೈಲ್ವೆ ಇವರು ಈ ಭಾಗದಲ್ಲಿ ರೈಲು ಸೇವೆಯನ್ನು ಮುಂದುವರೆಸುವುದಾಗಿಯೂ, ಇದರಿಂದಾಗಿ ಬಿಜಾಪುರದಿಂದ ಗದಗ್ ವರೆಗಿನ ಪೂರ್ಣ ಮಾರ್ಗದಲ್ಲಿ ರೈಲ್ವೆ ಸಂಪರ್ಕವು ಕಾರ್ಯಗತಗೊಳ್ಳುವುದನ್ನು ಹಾಗೂ ಈ ಮುಖೇನ ಸಾರ್ವಜನಿಕರಿಗೆ ಉಂಟಾಗುವ ತೊಂದರೆಯನ್ನು ನಿವಾರಿಸಿಕೊಳ್ಳಲು ಸಾಧ್ಯವಾಗುವುದೆಂದು ರೈಲ್ವೆಯವರು ಹಾಗೂ ಕರ್ನಾಟಕ ಸರ್ಕಾರವು ಶಪತ ಪ್ರಮಾಣ ಪತ್ರದ ಮುಖೇನ ಸಲ್ಲಿಸಿದ್ದಂತಹ ಪ್ರಮಾಣ ಪತ್ರವನ್ನು ಆಧರಿಸಿ ಮಾನ್ಯ ಕರ್ನಾಟಕ

ಉಚ್ಚ ನ್ಯಾಯಾಲಯವು ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದಿನಾಂಕ 21.9.2005 ರಂದು ಮುಕ್ತಾಯ ಮಾಡಿರುತ್ತದೆ.

ದಿನಾಂಕ 28.4.2005ರಂದು ಅಂದಿನ ಮಾನ್ಯ ಮುಖ್ಯಮಂತ್ರಿಯವರು ದೆಹಲಿಯಲ್ಲಿ ಮಾನ್ಯ ಕೇಂದ್ರ ಸಚಿವರನ್ನು ಭೇಟಿ ಮಾಡಿ ರಾಜ್ಯದ ಎಲ್ಲಾ ರೈಲ್ವೆ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಕೋರಿ ಒಂದು ಮೆಮೊರ್ಯಾಂಡಮ್‌ನ್ನು ಸಲ್ಲಿಸಿದ್ದರು. ಅಲ್ಲದೆ, ದಿನಾಂಕ 24.4.2005 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ರೈಲ್ವೆ ಮಂಡಳಿಯ ಅಧ್ಯಕ್ಷರೊಂದಿಗೆ ಸುದೀರ್ಘವಾಗಿ ಚರ್ಚಿಸಿ ರೈಲ್ವೆ ಯೋಜನೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಮನವಿ ಮಾಡಿದ್ದರು.

ದಿನಾಂಕ 28.2.2006ರಂದು ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಕೇಂದ್ರ ರೈಲ್ವೆ ಸಚಿವರನ್ನು ದೆಹಲಿಯಲ್ಲಿ ಭೇಟಿ ಮಾಡಿ ರಾಜ್ಯದ ಎಲ್ಲಾ ರೈಲ್ವೆ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಕೋರಿ ಒಂದು ಮೆಮೊರ್ಯಾಂಡಮ್‌ನ್ನು ಸಲ್ಲಿಸಿದ್ದರು. ಅಲ್ಲದೆ, ದಿನಾಂಕ 24.4.2005ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ರೈಲ್ವೆ ಮಂಡಳಿಯ ಅಧ್ಯಕ್ಷರೊಂದಿಗೆ ಸುದೀರ್ಘವಾಗಿ ಚರ್ಚಿಸಿ ರೈಲ್ವೆ ಯೋಜನೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಮನವಿ ಮಾಡಿದ್ದರು.

ದಿನಾಂಕ 28.2.2006 ರಂದು ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಕೇಂದ್ರ ರೈಲ್ವೆ ಸಚಿವರನ್ನು ದೆಹಲಿಯಲ್ಲಿ ಭೇಟಿ ಮಾಡಿ ರಾಜ್ಯದಲ್ಲಿನ ರೈಲ್ವೆ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಬಗ್ಗೆ ಚರ್ಚಿಸಿ ಒಂದು ಮೆಮೊರಾಂಡಮ್ ಅನ್ನು ಸಲ್ಲಿಸಿದ ಸಂದರ್ಭದಲ್ಲಿ ಹೊಸ ಬ್ರಾಡ್‌ಗೇಜ್ ಪರಿವರ್ತನೆ ಮಾಡದೆ, ಹಳೆಯ ಮೀಟರ್ ಗೇಜ್ ಮಾರ್ಗವನ್ನು ತೆಗೆದುಹಾಕಿದ ಕಾರಣದಿಂದಾಗಿ ಈ ಭಾಗದ ಜನರಿಗೆ ಸಂಪೂರ್ಣವಾಗಿ ರೈಲು ಸಂಪರ್ಕವು ತಪ್ಪಿ ಹೋಗಿರುವುದರಿಂದ ಬಾಗಲಕೋಟೆಯಿಂದ ಬಿಜಾಪುರದವರೆಗಿನ ಕಾಮಗಾರಿಯು ಪೂರ್ಣಗೊಂಡು ಗದಗದಿಂದ ಸೊಲ್ಲಾಪುರದವರೆಗಿನ ಸಂಪರ್ಕವನ್ನು ಮರುಸ್ಥಾಪಿಸುವಂತೆ ಈ ಮೂಲಕ ಈ ಭಾಗದ ಜನ ದೀರ್ಘಕಾಲದ ಬೇಡಿಕೆಯನ್ನು ಪೂರೈಸುವಂತೆ ಮನವಿ ಮಾಡಿರುತ್ತಾರೆ.

ದಿನಾಂಕ 12.5.2006ರಂದು ಮುಖ್ಯ ಆಡಳಿತಾಧಿಕಾರಿಗಳು (ನಿರ್ಮಾಣ), ನೈಋತ್ಯ ರೈಲ್ವೆ ಬೆಂಗಳೂರು, ಇವರು ಪ್ರಧಾನ

ಕಾರ್ಯದರ್ಶಿಗಳು, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರಿಗೆ ಬರೆದ ಪತ್ರದಲ್ಲಿ ಈ ಯೋಜನೆಗೆ ಕರ್ನಾಟಕ ಸರ್ಕಾರವು ತನ್ನ ಸಾಲಿನ ಮೊತ್ತ ರೂ.89.36 ಕೋಟಿಗಳನ್ನು ದಿನಾಂಕ 3.4.2006ರೊಳಗೆ ಪಾವತಿಸಿದ್ದರೂ ಈ ಮೊತ್ತವನ್ನು ಪಾವತಿಸುವ ಹಾಗೂ ತಾವು ಹಂಚಿಕೆ ಮಾಡುವುದರ ಅಂತರದ ವ್ಯತ್ಯಾಸದಿಂದಾಗಿ ಹಾಗೂ ಈ ಮೊತ್ತಗಳು 2003–04, 2004–05 ಹಾಗೂ 2005–06ನೇ ಸಾಲಿನ ಹಣಕಾಸಿನ ವರ್ಷದ ಕಡೆಯಲ್ಲಿ ರೈಲ್ವೆಯವರಿಗೆ ಬಿಡುಗಡೆಗೊಂಡಿರುವುದರಿಂದ ಯೋಜನೆಯ ಪ್ರಗತಿಯನ್ನು ಸಾಧಿಸಲಾಗಲಿಲ್ಲ ವೆಂದು, ಈ ಕಾರಣ ಈ ಗೇಜು ಪರಿವರ್ತನೆ ಯೋಜನೆಯ ಕಾಮಗಾರಿಯನ್ನು ಸಂಪೂರ್ಣವಾಗಿ ನಿರ್ಮಿಸಿ ಪೂರ್ಣಗೊಳಿಸಲು 86 ಕೋಟಿಗಳ ಹೆಚ್ಚುವರಿ ಮೊತ್ತದ ಅವಶ್ಯಕತೆ ಇರುತ್ತದೆಂದು, ಇದರಲ್ಲಿ ಕರ್ನಾಟಕ ಸರ್ಕಾರದ ಪಾಲು 43.00 ಕೋಟಿಗಳಾಗಿದ್ದು, ಈ ಮೊತ್ತವನ್ನು ತಮ್ಮ ಕಡೆಯಿಂದ ಪ್ರತ್ಯೇಕ ಪತ್ರದೊಡನೆ ಪರಿಷ್ಕೃತ ಅಂದಾಜು ಪಟ್ಟಿಯು ಕಳುಹಿಸಿದ ಕೂಡಲೇ ರೈಲ್ವೆಯವರಿಗೆ ಪಾವತಿಸಲು ಕ್ರಮ ಕೈಗೊಳ್ಳಲು ಕೋರಿರುತ್ತಾರೆ. ಆದರೆ ರೈಲ್ವೆಯವರಿಂದ ಇದುವರೆವಿಗೂ ಪರಿಷ್ಕೃತ ಅಂದಾಜು ಪಟ್ಟಿಯು ಲಭ್ಯವಾಗಿರುವುದಿಲ್ಲ. ಇದು ಲಭ್ಯವಾದ ಕೂಡಲೇ ಈ ವಿಷಯದಲ್ಲಿ ರಾಜ್ಯ ಸರ್ಕಾರದ ಹಾಗೂ ರೈಲ್ವೆ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಅಂತಿಮ ನಿರ್ಣಯ ತೆಗೆದುಕೊಳ್ಳಲಾಗುವುದು. ಬಾಗಲಕೋಟೆಯ ವರೆಗೆ ಹಳಿ ಪರಿವರ್ತನೆ ಕಾಮಗಾರಿ ಪೂರ್ಣಗೊಂಡಿದ್ದರೂ ರೈಲ್ವೆಯವರು ಸಣ್ಣ ಪ್ರಮಾಣದ ಉಳಿದ ಕೆಲಸಗಳನ್ನು ಪೂರ್ಣಗೊಳಿಸಿ ರೈಲ್ವೆ ಪ್ರಮಾಣೀಕರಿಗೆ ಸಂಚಾರಿ ಸೇವೆಯನ್ನೊದಗಿಸಲು ಎರಡು ತಿಂಗಳ ಕಾಲಾವಧಿಯನ್ನು ಕೋರಿರುತ್ತಾರೆ. ಈ ಮಧ್ಯೆ ಪ್ರಧಾನ ಕಾರ್ಯದರ್ಶಿಗಳು, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರು ದಿನಾಂಕ 29.6.2006 ರಂದು ಮುಖ್ಯ ಆಡಳಿತಾಧಿಕಾರಿ (ನಿರ್ಮಾಣ), ನೈಋತ್ಯ ರೈಲ್ವೆ, ಬೆಂಗಳೂರು, ಇವರಿಗೆ ರಾಜ್ಯದ ಮುಂದುವರೆದ ರೈಲ್ವೆ ಯೋಜನೆಗಳ ಅನುಷ್ಠಾನದ ಬಗ್ಗೆ ಒಂದು ಕಾಲಾವಧಿಯ ಕಾರ್ಯಕ್ರಮ ಹಾಕಿಕೊಳ್ಳಲು ತಿಳಿಸುತ್ತಾ, ಗದಗ್–ಬಾಗಲಕೋಟೆ ವಿಭಾಗದ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಯೋಜನೆ ವೆಚ್ಚದ ಹೆಚ್ಚಳದ ವಿವರಗಳನ್ನು ಕೂಡಲೇ ಒದಗಿಸಿದಲ್ಲಿ ಅಗತ್ಯವಾದ ಅನುದಾನವನ್ನು

ಮಂಜೂರು ಮಾಡಿಸಿಕೊಳ್ಳಲು ಸಾಧ್ಯವಾಗುತ್ತದೆಂದು ತಿಳಿಸುತ್ತಾ ಪತ್ರವನ್ನು ಬರೆದಿರುತ್ತಾರೆ.

ಶ್ರೀ ಶಿವಾನಂದ ಎಸ್. ಪಾಟೀಲ್: ಉಪಾಧ್ಯಕ್ಷರೆ, ಮಾನ್ಯ ಸಚಿವರು ಬಹುತೇಕ ದೀರ್ಘವಾದ ಉತ್ತರವನ್ನು ಕೊಡುವಂತಹ ಅವಶ್ಯಕತೆ ಇರಲಿಲ್ಲವೆಂದು ನನಗನ್ನಿಸುತ್ತದೆ. ಏಕೆಂದರೆ ಅವರು ಈ ರೈಲ್ವೆ ಲೈನ್ ಆಗಲಿ ಎಂದು ಹೋರಾಟ ಮಾಡಿದಂತಹ ವ್ಯಕ್ತಿ ಅವರು. ಯಾರ್ಯಾರು ಇದರಲ್ಲಿ ಹೋರಾಟವನ್ನು ಮಾಡಿದ್ದರೋ ಅವರು ಕೇಂದ್ರದಲ್ಲಿ ರೈಲ್ವೆ ಸಚಿವರಾಗಿದ್ದರು. ಇನ್ನೊಬ್ಬ ಶಾಸಕರು ಬಂದಿಲ್ಲ, ಇದೇ ಬ್ರಾಡ್‌ಗೇಜ್ ಸಲುವಾಗಿ ಅವರು ಬೇಲ್ ಮೇಲೆ ಇದ್ದಾರೆ. ಅವರು ಬಿಜೆಪಿ ಶಾಸಕರಾಗಿದ್ದಾರೆ. ಅವರ ಬಗ್ಗೆ ನಾನು ಅವರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇಷ್ಟು ಕಮಿಟ್‌ಮೆಂಟ್ ಇರುವಂತಹವರು ತಾವು ತಾವು ಅಧಿಕಾರಕ್ಕೆ ಬಂದು 4 ತಿಂಗಳಾಯಿತು. ಈ ಪರಿಷ್ಕೃತ ಅಂದಾಜು 80 ಅಥವಾ 90 ಕೋಟಿ ರೂಪಾಯಿಗಳು ಇರಬಹುದು. ಅದರ ಬಗ್ಗೆ ನನಗೆ ಗೊತ್ತಿಲ್ಲ, ಇದರ ಬಗ್ಗೆ ನೀವು ಹೇಳುತ್ತಿರಬಹುದು. ಅದು ಎಷ್ಟು ಇದೆ ಅದನ್ನು ಕೇಂದ್ರ ಸರ್ಕಾರಕ್ಕೆ ತುಂಬಬೇಕು ಎನ್ನುವಂತಹ ಮನವಿಯನ್ನು ತಾವು ಮಾಡಿಕೊಳ್ಳಿ. ನಿಜವಾಗಲೂ ಏನಾದರೂ ತಮಗೆ ಕಮಿಟ್‌ಮೆಂಟ್ ಇದ್ದರೆ; ಏಕೆಂದರೆ, ಯಾರು ಈ ರೈಲ್ವೆ ಹಳಿಯನ್ನು ಕಿತ್ತು ಒಗೆದಿದ್ದರೋ ಅವರೇ ಇವತ್ತು ರೈಲ್ವೆ ಮಂತ್ರಿಯಾದರು, ಅವರೂ ಕೂಡ ಬ್ರಾಡ್‌ಗೇಜ್‌ನ್ನೂ ಕೂಡ ಮಾಡಲಿಲ್ಲ. ಈಗ ನಿಮ್ಮ ಹಿಂದೆ ಒಬ್ಬ ಶಾಸಕರು ಕುಳಿತಿದ್ದಾರೆ, ಅವರು ಈ ಬ್ರಾಡ್‌ಗೇಜ್ ಸಲುವಾಗಿ ಬೇಲ್‌ಮೇಲೆ ಇದ್ದಾರೆ, ಅವರು ಬಿಜೆಪಿಯ ಶಾಸಕರಾಗಿದ್ದಾರೆ. ತಾವು ಕೂಡ ಹುಬ್ಬಳ್ಳಿಯಲ್ಲಿ ಕುಳಿತು ಇದರ ಬಗ್ಗೆ ಹೋರಾಟವನ್ನು ಮಾಡಿದ್ದೀರಿ. ಮತ್ತೇ ಈ ಪರಿಷ್ಕೃತ ಅಂದಾಜುನ್ನು ತಾವು ಕೇಂದ್ರದಿಂದ ತುಂಬಿಸುತ್ತೇನೆ ಎನ್ನತಕ್ಕಂತಹ ಮಾತನ್ನು ಈ ಉತ್ತರದಲ್ಲಿ ಕೊಡಬಾರದಾಗಿತ್ತು. ಈಗ ಕೆರೈಡ್‌ನಿಂದ ಷೇರ್ ಮಾಡಬೇಕಲ್ಲಾ? ತಾವು ಇದರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಕೇಂದ್ರದಿಂದ ತುಂಬಿಸುತ್ತೇವೆಂದು ಹೇಳಲಿಲ್ಲ. 2005–06ನೇ ಸಾಲಿನಲ್ಲಿ ಒಟ್ಟು 2050 ಕೋಟಿ ರೂಪಾಯಿಗಳ ಅಂದಾಜು ಪತ್ರಿಕೆಯನ್ನು ರೈಲ್ವೆ ಇಲಾಖೆಯವರು ಮಾಡಿಕೊಟ್ಟಿದ್ದಾರೆ. 1988–89ನೇ

ಸಾಲಿನಲ್ಲಿ ಅಂದಾಜು ಪತ್ರಿಕೆಯನ್ನು ಮಾಡಿದಾಗ 178.72 ಕೋಟಿ ರೂಪಾಯಿಗಳಾಗಿತ್ತು. ಅದರ ಅರ್ಧ ಹಣವನ್ನು ನಾವು 89.36 ಕೋಟಿ ರೂಪಾಯಿಗಳು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಅಂದರೆ ರೈಲ್ವೆ ಇಲಾಖೆಗೆ ತುಂಬಿದ್ದೇವೆ. ಈಗ ಏನು ರಿವೈಸ್ಡ್ ಎಸ್ಟಿಮೇಟ್ ಮಾಡಿದ್ದಾರೆ, ಟ್ಯಾಲೆನ್ಸ್ ಉಳಿದಿರುವಂತಹ ಕೆಲಸಗಳಾದ ಬಾಗಲಕೋಟೆಯಿಂದ ಗದಗ್‌ವರೆಗೂ 90 ಕಿಲೋಮೀಟರ್‌ಗೆ ಇನ್ನೂ ಹೆಚ್ಚುವರಿಯಾಗಿ 86 ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಅವರು ಹೇಳಿದ್ದಾರೆ. ನಾವು ನಮ್ಮ ಸರ್ಕಾರದ ವತಿಯಿಂದ 43 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ನಾವು ಸಿದ್ದವಿದ್ದೇವೆ. ಅವರು ಯಾವುದೇ ಸಂದರ್ಭದಲ್ಲಿ ಕೇಳಿದರೂ ಕೂಡ ಕೊಡುತ್ತೇವೆ. ಆದರೆ ನಾವು ರೈಲ್ವೆ ಇಲಾಖೆಗೆ ಒಂದು ಕ್ಲಾರಿಫಿಕೇಷನ್‌ನ್ನು ಕೇಳಿದ್ದೇವೆ. ನೀವು ಈ ಹಣವನ್ನು ಎಷ್ಟು ಅವಧಿಯಲ್ಲಿ ಖರ್ಚು ಮಾಡುತ್ತೀರಿ. ನಾವು ಒಂದೇ instalment ನಲ್ಲಿ ಕೊಡಬೇಕೇ ಅಥವಾ ಎರಡು instalments ನಲ್ಲಿ ಕೊಡಬೇಕೇ ಎನ್ನುವುದು; ಮತ್ತೊಂದು ಯಾವ್ಯಾವ ಬಾಬ್ತಿಗಾಗಿ ಎಷ್ಟು ಹಣ ಖರ್ಚು ಮಾಡುತ್ತೀರಿ? 86.00 ಕೋಟಿ ರೂಪಾಯಿಗಳಿಗೆ ಒಂದು details ಕೊಡಬೇಕು, ಒಂದು estimate copy ಮಾಡಿ ಕೊಡಬೇಕು, ಇಲ್ಲವೇ line estimate ಆದರೂ ಕೊಡಬೇಕು. ಹಳಿಗೆ ಖರ್ಚು ಮಾಡುವಿರಾ? ಸ್ಲೀಪರ್‌ಗೆ ಖರ್ಚು ಮಾಡುವಿರಾ? Bridgesಗೆ ಖರ್ಚು ಮಾಡುವಿರಾ? ಯಾವ ಕಾರಣಕ್ಕಾಗಿ ಖರ್ಚು ಮಾಡುತ್ತಾರೆಂಬುದನ್ನು ಅವರು ಹೇಳಬೇಕಾಗುತ್ತದೆ. ಅದಕ್ಕಾಗಿ ನಾವು ರೈಲ್ವೆ ಇಲಾಖೆಗೆ clarification ಕೇಳಿದ್ದೇವೆ, ಪತ್ರವನ್ನು ಬರೆದಿದ್ದೇವೆ. ಅವರು ನಾಳೆಯೇ ನಾವು ಕೇಳಿದಂತಹ ಮಾಹಿತಿಯನ್ನು ಕಳುಹಿಸಿದರೆ, 24 ಗಂಟೆಯೊಳಗೆ 43.00 ಕೋಟಿ ರೂಪಾಯಿಗಳನ್ನು ನಾವು ಕೊಡಲಿಕ್ಕೆ ಸಿದ್ಧರಿದ್ದೇವೆ. ಆ ಕೆಲಸ ಆಗಬೇಕೆನ್ನುವಂಥ ಕಳಕಳಿ ಮಾನ್ಯ ಸದಸ್ಯರಾದಂಥ ಶಿವಾನಂದ ಪಾಟೀಲರಿಗೆ ಎಷ್ಟು ಇದೆಯೋ ಅದಕ್ಕಿಂತಲೂ ಹೆಚ್ಚಿನ ಕಳಕಳಿ ನಮಗೆಲ್ಲರಿಗೂ ಇದೆ. ಹಿಂದಿನ ರೈಲ್ವೇ ಸಚಿವರ ಬಗ್ಗೆ ಅವರು ಮಾತನಾಡಿದರು. ದಯವಿಟ್ಟು ತಾವು yield ಆಗಬೇಕು ಸರ್.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಸಚಿವರು ಅವರು ಕಾಗದ ಪತ್ರಗಳನ್ನು ಕಳುಹಿಸಲಿ, ನಂತರ ಹಣ ಬಿಡುಗಡೆ ಮಾಡುತ್ತೇವೆಂದು ಹೇಳುವುದು ಸರಿಯಲ್ಲ, ಅವರು ಮಾಹಿತಿಯನ್ನು ಕಳುಹಿಸದಿದ್ದರೆ ಏನು

ಮಾಡುತ್ತೀರಿ? ಹೋಗಿ ನಮ್ಮ ಕೆಲಸಕ್ಕೆ ನಾವು ಅಡ್ಡಾಡಬೇಕಾಗಿದೆ. ನೀವು ಸರ್ಕಾರವರು ಏತಕ್ಕೆ ಹಾಗೆ ಹೇಳುತ್ತೀರಿ, ಅವರು ಮಾಹಿತಿ ಕಳುಹಿಸಲಿ ಎಂದರೆ ಹೇಗಾಗುತ್ತದೆ?

ಶ್ರೀ ಗೋವಿಂದ ಎಂ. ಕಾರಜೋಳ: ಪಾಟೀಲರೇ, ಒಂದು ನಿಮಿಷ ತಾವು yield ಆಗಬೇಕು. ನಾನು ಮಾತನಾಡಿದ ನಂತರ ನೀವು clarification ಕೇಳಬಹುದು. ಮಾನ್ಯ ಅಧ್ಯಕ್ಷರೇ, ನಾವು ಅವರಿಗೆ ಮಾಹಿತಿಯನ್ನು ಕಳುಹಿಸಲಿ ಎಂದು ಕೇಳಿಲ್ಲ, ಅವರು 43.00 ಕೋಟಿ ರೂ.ಗಳನ್ನು ತುಂಬಬೇಕು ಎಂದು ಹೇಳಿದ್ದಾರೆ.

ಉಪಾಧ್ಯಕ್ಷರು: ಪಾಟೀಲರೇ, ಒಂದು ನಿಮಿಷ ತಾವು ಕುಳಿತುಕೊಳ್ಳಿ, ಆಮೇಲೆ ಕೇಳಿ.

ಶ್ರೀ ಗೋವಿಂದ ಎಂ. ಕಾರಜೋಳ: ಅವರು ಹೇಳಿದಂತೆ 43.00 ಕೋಟಿ ರೂಪಾಯಿಗಳನ್ನು ನಾವು ತುಂಬಲಿಕ್ಕೆ ಸಿದ್ಧರಿದ್ದೇವೆ. ಆದರೆ 43.00 ಕೋಟಿ ರೂ.ಗಳಲ್ಲಿ ನಮ್ಮ ಪಾಲಿನ ಶೇಕಡ 50 ರಷ್ಟು, ರೈಲ್ವೆ ಇಲಾಖೆಯ ಶೇಕಡ 50 ರಷ್ಟು ಇರುವ ಹಣವನ್ನು ಎಷ್ಟು ದಿನಗಳಲ್ಲಿ ಖರ್ಚು ಮಾಡುತ್ತೀರಿ? ಎಷ್ಟು ಅವಧಿಯಲ್ಲಿ, ಯಾವ್ಯಾವ ಬಾಬ್ತಿಗಾಗಿ ಖರ್ಚು ಮಾಡುತ್ತೀರಿ ಎಂಬ ಬಗ್ಗೆ clarification ಕೇಳಿದ್ದೇವೆ. ಏಕೆಂದರೆ ನಮಗೂ ಸಹ ಮಾಹಿತಿ ಬೇಕು. ಆ ಕಾರಣಕ್ಕಾಗಿ ಈ ಕೆಲಸ ವಿಳಂಬವಾಗಿದೆಯೇ ಹೊರತು ಸರ್ಕಾರದಿಂದ ಯಾವುದೇ ಕಾರಣಕ್ಕೂ ವಿಳಂಬವಾಗಲಿಕ್ಕೆ ಸಾಧ್ಯವಿಲ್ಲ. ಅವರಿಂದ ಮಾಹಿತಿ ಬಂದ ತಕ್ಷಣ ನಾವು ಹಣವನ್ನು ತುಂಬಲಿಕ್ಕೆ ಸಿದ್ಧರಿದ್ದೇವೆ.

ಶ್ರೀ ಡಿ.ಆರ್. ಪಾಟೀಲ್: ಕಾರಜೋಳರವರೇ, ಈಗ ಒಂದು ವಾರದ ಹಿಂದೆ Railway Users' Consulative Committee Meeting ಆಯಿತು, ಈ ಸಭೆಯಲ್ಲಿ ನಾವು ಇದರ ಬಗ್ಗೆ specific ಆಗಿ ಕೇಳಿದ್ದೇವೆ. ಏನೆಂದರೆ ನಿಮಗೆ ನಮ್ಮ ಸರ್ಕಾರದಿಂದ ಕೊಡಬೇಕಾಗಿರುವ 43.00 ಕೋಟಿ ರೂಪಾಯಿಗಳು ಇದೇ ಹಣಕಾಸಿನ ವರ್ಷದೊಳಗೆ ಬೇಕೇ ಅಥವಾ ಈ ಹಣಕಾಸು ವರ್ಷದೊಳಗೆ ಅರ್ಧ ಹಣ, ಮುಂದಿನ ಹಣಕಾಸು ವರ್ಷದೊಳಗೆ ಅರ್ಧ ಕೊಟ್ಟರೆ ನಡೆಯುತ್ತದೆಯೇ ಎಂದು ನಾವು ಕೇಳಿದ್ದೇವೆ, ಅದಕ್ಕೆ ಈಗ ಅರ್ಧ ಹಣ, ಮುಂದಿನ ಹಣಕಾಸು ವರ್ಷದೊಳಗೆ ಪೂರ್ತಿ ಹಣವನ್ನು ಕೊಟ್ಟರೆ 2008 ರೊಳಗೆ ಈ ಪ್ರಾಜೆಕ್ಟ್ ಅನ್ನು complete ಮಾಡಲಿಕ್ಕಾಗುತ್ತದೆ ಎಂದು

ನಮ್ಮ G.M. ಅವರು ಮೀಟಿಂಗ್‌ನಲ್ಲಿ ಹೇಳಿದರು. ಅದಕ್ಕೆ ದಯವಿಟ್ಟು ತಾವು ಶಾಸಕರಾಗಿದ್ದಾಗ ಹೇಗೆ ಕೆಲಸ ಮಾಡುತ್ತಿದ್ದಿರಿ, ಹಾಗೆಯೇ ಮಂತ್ರಿಗಳಿದ್ದಾಗ್ಯೂ ಸಹ ಕೆಲಸ ಮಾಡಬೇಕು. ಸರ್ಕಾರದೊಳಗೆ ಈ ಸರ್ಕಾರವೇ ಇರಲಿ, ಕೇಂದ್ರ ಸರ್ಕಾರವೇ ಇರಲಿ, File ಗೆ ಕಾಲಿಲ್ಲ, ನಾವು ಬೇಕಾದವರೇ ಅಡ್ಡಾಡಿ ಬೆನ್ನು ಹತ್ತಿ ಕಾಗದಪತ್ರಗಳನ್ನು ತಂದರೆ ಮಾತ್ರ ಕೆಲಸವಾಗುತ್ತದೆ. ಆದ್ದರಿಂದ ನೀವು ದಯವಿಟ್ಟು ಅವರಿಂದಲೇ ಕಾಗದಪತ್ರ ಬರಲಿ ಎಂದು ಅಪೇಕ್ಷೆ ಮಾಡಬೇಡಿ ಒಬ್ಬರನ್ನು ಮುದ್ದಾಂ ಕಳುಹಿಸಿ ಆ ಕಾಗದಪತ್ರಗಳನ್ನು ನಾಳೆ ತರಿಸಿಕೊಳ್ಳಿರಿ. ಈಗಾಗಲೇ ಕೇಂದ್ರ ಸರ್ಕಾರದವರು ತಮ್ಮ ಪಾಲಿನ 20 ಕೋಟಿ ರೂಪಾಯಿಗಳನ್ನು ಈ ಹಣಕಾಸು ವರ್ಷದೊಳಗೆ release ಮಾಡಿದ್ದಾರೆ. ನಾವು matching grant immediate release ಮಾಡಿದರೆ ಈ ಕೆಲಸ ನಿರಂತರವಾಗಿ ನಡೆಯುತ್ತದೆ. ಇಲ್ಲವಾದರೆ slow ಆಗುತ್ತದೆ. ತಮಗೂ ಗೊತ್ತಿದೆ, ಈ ಕೆಲಸ ಪ್ರಾರಂಭವಾಗಿ ಎಷ್ಟು ವರ್ಷವಾಯಿತು ಏನೋ ನಮ್ಮ ದುರ್ದೈವ, ಜಾಫರ್ ಷರೀಫ್‌ರವರು ಇನ್ನೊಂದು ಐದಾರು ತಿಂಗಳು ಮುಂದುವರೆದಿದ್ದರೆ ಆಗಲೇ ಈ ಕೆಲಸವನ್ನೂ ಮುಗಿದುಹೋಗುತ್ತಿತ್ತು. ಅವರ ಇಲಾಖೆ ಬದಲಾವಣೆ ಯಾಗಿದ್ದರಿಂದ ನಾವು ತೊಂದರೆಗೊಳಗಾಗಿದ್ದೇವೆ. ಈಗ ಮತ್ತಷ್ಟು ವಿಳಂಬವಾಗುವುದು ಬೇಡ.

ಶ್ರೀ ಎಸ್.ಎಸ್. ಪಾಟೀಲ್: ಅಧ್ಯಕ್ಷರೇ, ಈಗ ಇವರು ಕೋರ್ಟಿಗೆ ಬರೆದು ಕೊಟ್ಟಿದ್ದಾರೆ. ಕೇಂದ್ರ ಮತ್ತು ರಾಜ್ಯಸರ್ಕಾರದವರು ಕೋರ್ಟಿಗೆ ಬರೆದು ಕೊಟ್ಟು contempt of court ಆಗುತ್ತದೆ. ಜೂನ್ 2006ರೊಳಗೆ ರೈಲ್ವೆ ಸಂಪರ್ಕವನ್ನು ಜನರಿಗೆ ಕಲ್ಪಿಸಿಕೊಡುತ್ತೇವೆಂದು ನೀವು ಕೋರ್ಟಿಗೆ ಬರೆದುಕೊಟ್ಟಿದ್ದೀರಿ. ಅದರ ಬಗ್ಗೆ ಕೂಡ ನಿಮ್ಮ ಎರಡೂ ಸರ್ಕಾರದವರಿಗೆ ಗಮನವಿಲ್ಲ. ಇದು ಪ್ರಶ್ನೆಯಲ್ಲ, ಇನ್ನೂ ಎಷ್ಟು ವರ್ಷವಾಗುತ್ತದೆ ಎಂಬುದೇ ನಮಗೆ ಅರ್ಥವಾಗುತ್ತಿಲ್ಲ. ಆ ಕಾರಣದಿಂದ ಬರೇ ಬರೆದುಕೊಟ್ಟರೆ ಆಗುವುದಿಲ್ಲ. ಮಾನ್ಯ ಡಿ.ಆರ್. ಪಾಟೀಲರು ಹೇಳಿದಂತೆ ನಾಳೆ ಒಬ್ಬರನ್ನು ನೇಮಿಸಿ ಅಲ್ಲಿಗೆ ಅಡ್ಡಾಡಿಸಿ ಮಾಹಿತಿಯನ್ನು ತರಿಸಬೇಕು.

ಶ್ರೀ ಶಿವಾನಂದ ಎಸ್. ಪಾಟೀಲ್: ನಿಮಗೆ ಕಾಳಜಿ ಇದ್ದು ನೀವು ಕೆಲಸ ಮಾಡುತ್ತೀರಿ ಎಂದು ನಮಗೆ ಅನ್ನಿಸಬೇಕಲ್ಲವೇ?

ಶ್ರೀ ಸಿ.ಸಿ. ಪಾಟೀಲ್: ಈಗ ಕಾರಜೋಳರವರು ಪ್ರಯತ್ನ ಮಾಡುತ್ತಾರೆ ಎನ್ನುವುದರ ಬಗ್ಗೆ ಎರಡನೇ ಮಾತಿಲ್ಲ, ಆದರೆ ಈ ವಿಷಯದೊಳಗೆ ಮಾನ್ಯ ಹಿರಿಯ ಸದಸ್ಯರಾದಂಥ ಶ್ರೀ ಡಿ.ಆರ್. ಪಾಟೀಲರವರ ಅಭಿಮತಕ್ಕೆ ನಾನು ಸ್ಪಂದಿಸುತ್ತೇನೆ. ರೈಲ್ವೆ ಇಲಾಖೆಯವರು ಯಾವ ಬಾಬ್ತಿಗೆ ಎಷ್ಟು ದಿನಗಳಲ್ಲಿ ಖರ್ಚು ಮಾಡುತ್ತಾರೆಂಬ ಬಗ್ಗೆ file ಕೊಟ್ಟ ತಕ್ಷಣ 24 ಗಂಟೆಗಳಲ್ಲಿ ನಾವು ಹಣವನ್ನು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡುತ್ತೇವೆ ಎಂದು ಕಾರಜೋಳ ಸಾಹೇಬರು ಹೇಳಿದ್ದಾರೆ. ಅದು ಸರಿಯಾದ ಭಾವನೆಯಲ್ಲ, ಸರಿಯಾದ ಅನಿಸಿಕೆಯಲ್ಲ ಎಂದು ನಾನು ಹೇಳಲಿಚ್ಚಿಸುತ್ತೇನೆ. ಏಕೆಂದರೆ ರೈಲ್ವೆ ಇಲಾಖೆಯವರಿಗೆ ಅದರ ಬಗ್ಗೆ ಆಸಕ್ತಿ ಇಲ್ಲ. ಅದಕ್ಕೆ ನಮ್ಮ ರಾಜ್ಯಸರ್ಕಾರದ ವತಿಯಿಂದ special ಆಗಿ ಒಬ್ಬ ಹಿರಿಯ ಉನ್ನತ ಮಟ್ಟದ ಅಧಿಕಾರಿಯನ್ನು depute ಮಾಡಿ ಅವರಿಂದ ವಿವರಗಳನ್ನು ತರಿಸಿಕೊಂಡು ಮಾನ್ಯ ಮಂತ್ರಿಗಳು ಹೇಳಿದ ರೀತಿಯಲ್ಲಿ ಆದಷ್ಟು ಬೇಗನೇ ಹಣವನ್ನು ರೈಲ್ವೆ ಇಲಾಖೆಗೆ ತುಂಬಿ ಆ ಭಾಗದ ಜನರ ಕನಸು ಈಡೇರುವಂತೆ ತಮ್ಮ ಮುಖಾಂತರ ನಾನು ಮಾನ್ಯ ಮಂತ್ರಿಯವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್: ಕಾರಜೋಳರವರು ನನಗಿಂತ ಹೆಚ್ಚು ಕಾಳಜಿ ಅವರಿಗಿದೆ ಎಂದು ಹೇಳಿದರು. ಅವರಿಗೆ ಕಾಳಜಿ ಇದ್ದಂಥ ಕೇಂದ್ರ ಸಚಿವರೇ ರೈಲ್ವೆ ಹಳಿ ಕಿತ್ತಿದ್ದಾರೆ. ಅದು ಅವರಿಗೆ ಗೊತ್ತಿದೆಯೇ ಇಲ್ಲವೇ ಎಂಬುದು ನನಗೆ ಗೊತ್ತಿಲ್ಲ. ಬೋಗಿ ನೂ ಸುಟ್ಟು, ವಿಶ್ವೇಶ್ವರ ಹೆಗಡೆ ಅವರು ಇಲ್ಲಿಯೇ ಇದ್ದಾರೆ, ನಾನು ಅದನ್ನು ಹೇಳಬಾರದು. He is on bail in this case. ಇವತ್ತಿಗೂ ಅವರು ಬೇಲ್ ಮೇಲಿದ್ದಾರೆ. ಕೇಂದ್ರ ರೈಲ್ವೆ ಸಚಿವರಾಗಿದ್ದವರೂ ಸಹ ಬೇಲ್‌ನಲ್ಲಿದ್ದಾರೆ. ನಾನು ತಮಗೆ ಕಾಳಜಿ ಇದ್ದರೆ ಸ್ವಾಗತಿಸುತ್ತೇನೆ. ಆದರೆ ತಮಗೆ ಗೊತ್ತಿರುವಂತೆ ಇದೇ 23.6.2006ಕ್ಕೆ ಕೇಂದ್ರ ಸರ್ಕಾರದವರು 20.00 ಕೋಟಿ ರೂಪಾಯಿಗಳಷ್ಟು ಹಣ ಬಿಡುಗಡೆ ಮಾಡಿದ್ದಾರೆ. ಆದರೆ ನಿಮ್ಮ matching grant ಹಣ ಅವರಿಗೆ ಇನ್ನೂ ಜಮಾ ಆಗಿಲ್ಲ. ಹೌದು ಸರ್, ನಾನು ಹೇಳುತ್ತಿದ್ದೇನೆ. ಆ PIL ಹಿನ್ನೆಲೆಯಲ್ಲಿ discussion ಆಗಿ 20.00 ಕೋಟಿ ರೂ.ಗಳನ್ನು ಅವರು already ತುಂಬಿದ್ದಾರೆ. ನಿಮ್ಮಿಂದ 20.00 ಕೋಟಿ ರೂ.ಗಳನ್ನು ಬಿಡುಗಡೆ ಮಾಡುವಂತೆ ಅವರು ಒಂದು ಪತ್ರವನ್ನೂ ಬರೆದಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಹಳೆಯ estimate ಪ್ರಕಾರ 20.00 ಕೋಟಿ ರೂ.ಗಳನ್ನು ಅವರು ತುಂಬಿದರು. ರಾಜ್ಯ ಸರ್ಕಾರವು ತನ್ನ ಪಾಲಿನ ಹಣವನ್ನು ತುಂಬಿದೆ. ಈಗೇನು escalation ಆಗಿದೆಯೆಲ್ಲಾ, ಅದರ difference ಹಣವನ್ನು ಈಗ ತುಂಬಬೇಕಾಗಿದೆ.

ಶ್ರೀ ಶಿವಾನಂದ ಪಾಟೀಲ್: ಶೆಟ್ಟರ್‌ರವರೇ, 1993–94 ರಲ್ಲಿ ಆಗಿರುವಂಥ ಯೋಜನೆಯಿದು, Revised estimate ಆಗುವುದು ಸಹಜ. ಅದು ನಿರಂತರ, ನೀವು ಅವರಿಂದಲೇ revised estimate ಗೆ ಎಷ್ಟು amount ಆಯಿತು ಅನ್ನುವುದನ್ನು ಕೇಳಿದರೆ ಆಗ ನೀವೇನು ಹೇಳುತ್ತೀರಿ? ನೀವು ಹಣವನ್ನು ಬಿಡುಗಡೆ ಮಾಡಿದರೆ ಕೇಂದ್ರ ಸರ್ಕಾರದವರು ಹಣ ಬಿಡುಗಡೆ ಮಾಡಿರುವುದಿಲ್ಲ. ಆಗ ನಾವು ಯಾರನ್ನು ಕೇಳಬೇಕು? ಅದಕ್ಕೇ ನಾವು ಹೇಳಿದ್ದು, ಸಂಪೂರ್ಣವಾದ ಹಣವನ್ನು ನೀವು ರಾಜ್ಯಸರ್ಕಾರದಿಂದ ಮಾಡಿ ಅಂತ. ಏಕೆಂದರೆ ಬಿಜಾಪುರ, ಗದಗ, ಕೇವಲ ಬಿಜಾಪುರ ಜಿಲ್ಲೆ ಮಾತ್ರ ಬರುವುದಿಲ್ಲ, ಬಾಗಲಕೋಟೆ, ಗದಗ, ಹುಬ್ಬಳ್ಳಿ ಎಲ್ಲಾ ಬರುತ್ತದೆ. ಮತ್ತೆ ಇನ್ನೊಂದು ವಿಷಯ ಹೇಳುವುದಾದರೆ, ಬಿಜಾಪುರಕ್ಕೆ four lane high way ಇದೆಯೇ? ಏನು aerodrome ಇದೆಯೇ? Atleast ಒಂದು broad gauge ಮಾಡಿಕೊಡುವಂಥ commitment ಈ ಸರ್ಕಾರಗಳಿಗೆ ಇರಲಿಲ್ಲವೆಂದರೆ ಅದಕ್ಕಿಂತ ಹೆಚ್ಚು ಏನು commitment ನಿಮಗೆ ಇದೆ ಎಂಬುದನ್ನು ದಯಮಾಡಿ ಹೇಳಬೇಕು. ಆ ಹಣವನ್ನು ಒಟ್ಟಿಗೆ ತುಂಬುವಿರಾ ಎಂದು ತಾವು ಹೇಳಬೇಕು.

ಶ್ರೀ ಡಿ.ಆರ್. ಪಾಟೀಲ್: ಜಗದೀಶ್ ಶೆಟ್ಟರ್‌ರವರಿಗೆ ಹಿಂದಿನ ಲೆಕ್ಕದಲ್ಲಿಯೇ ಕೇಂದ್ರ ಸರ್ಕಾರದವರು ಬಿಡುಗಡೆ ಮಾಡಿದ್ದಾರೆ ಎಂಬ ಕಲ್ಪನೆ ಇರಬೇಕು. ಈಗೇನು escalation amount ಇದೆ 86.00 ಕೋಟಿ ರೂ.ಗಳಲ್ಲಿ ಅವರು 43.00 ಕೋಟಿ ರೂ. ನೀವು ರೂ. 43.00 ಕೋಟಿ ರೂ. ತುಂಬಬೇಕು. ಆ 43.00 ಕೋಟಿ ರೂಪಾಯಿಗಳಲ್ಲಿ 20.00 ಕೋಟಿ ರೂಪಾಯಿಗಳನ್ನು ಅವರು ಬಿಡುಗಡೆ ಮಾಡಿದ್ದಾರೆ. ಅದಕ್ಕೆ ನೀವು matching grants ಅನ್ನು immediate ಆಗಿ ಅಂದರೆ 20.00 ಕೋಟಿ ರೂಪಾಯಿಗಳನ್ನು ನಾಳೆಯೇ ಬಿಡುಗಡೆ ಮಾಡಿಸುತ್ತೇವೆಂದು ಹೇಳಿಬಿಡಿ. ಆ 20.00 ಕೋಟಿ ರೂಪಾಯಿಗಳನ್ನು ನೀವು ಕೊಟ್ಟರೆ ಕೆಲಸ ಪ್ರಾರಂಭವಾಗುತ್ತದೆ. ನಿಮಗೆ ಬೇಕಾಗಿರುವ ಮಾಹಿತಿಯನ್ನೆಲ್ಲಾ ತರಿಸಿಕೊಂಡು ಉಳಿದ 23.00 ಕೋಟಿ

ರೂಪಾಯಿಗಳನ್ನೂ ಸಹಿತ ಮುಂದಿನ ಏಪ್ರಿಲ್‌ನೊಳಗೆ definite ಆಗಿ release ಆಗುವ ಹಾಗೆ ನೀವು commitment ಮಾಡಬೇಕು.

ಶ್ರೀ ಗೋವಿಂದ ಎಂ. ಕಾರಜೋಳ: ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರಕ್ಕೆ ಎಷ್ಟು ಕಳಕಳಿ, ಕಾಳಜಿ ಇದೆಯೆಂಬುದನ್ನು ಬರೇ ಬಾಯಿ ಮಾತಿನಲ್ಲಿ ನಾನು ಹೇಳುವುದಿಲ್ಲ, ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮಾರ್ಚ್ ತಿಂಗಳಿನಲ್ಲಿ ನಾವು 36.00 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ ಎಂದು ಸದನಕ್ಕೆ ನಾನು ತಿಳಿಸಲಿಕ್ಕೆ ಬಯಸುತ್ತೇನೆ. ಮಾನ್ಯ ಧರಂಸಿಂಗ್‌ರವರು ಇದ್ದಾಗ ಬಿಡುಗಡೆಯಾಗಿಲ್ಲ ; ಬೇಕಿದ್ದರೆ cheque date ಅನ್ನು ತಾವು ನೋಡಬಹುದು. ಈ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 36.00 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ನಮಗಿರುವಂಥ ಕಳಕಳಿ, ಕಾಳಜಿ ಅದರಿಂದಲೇ ವ್ಯಕ್ತವಾಗುತ್ತದೆ. 1993–94ನೇ ಸಾಲಿನಲ್ಲಿ ಪ್ರಾರಂಭವಾದಂಥ ಈ ಯೋಜನೆಗೆ ಹಿಂದಿನ ಸರ್ಕಾರಗಳು ಯಾವ ರೀತಿಯಾಗಿ ಹಣ ಬಿಡುಗಡೆ ಮಾಡಿವೆ ಅದರ ಬಗ್ಗೆ ಆಗ ಎಷ್ಟು ಕಳಕಳಿ, ಕಾಳಜಿ ಮತ್ತು ಎಂಬ ಬಗ್ಗೆ ಮಾನ್ಯ ಡಿ.ಆರ್. ಪಾಟೀಲರವರಿಗೆ ನಾನು ಹೇಳಬಯಸುವುದಿಲ್ಲ. ಏಕೆಂದರೆ ಅವರು ಅಲ್ಲಿದ್ದಂತಹವರು, ಅವರಿಗೆಷ್ಟು ಕಳಕಳಿ ಇತ್ತು, ನಮಗೆ ಎಷ್ಟು ಕಳಕಳಿ ಇತ್ತು ಎಂಬುದರ ಬಗ್ಗೆ ನಾನು ಹೇಳಬಯಸುವುದಿಲ್ಲ. ಈಗ ಎಸ್.ಎಸ್.ಪಾಟೀಲರು ಮಾತನಾಡಿದಂಥ ಸಂದರ್ಭದಲ್ಲಿ 30.06.2006 ರೊಳಗಾಗಿ ಬಾಗಲಕೋಟೆಯವರೆಗೆ ರೈಲ್ವೆ ಸಂಪರ್ಕ ಕಲ್ಪಿಸುವ ಕೆಲಸವನ್ನು ಪ್ರಾರಂಭ ಮಾಡುತ್ತೇವೆಂದು ಕೋರ್ಟಿನಲ್ಲಿ ಬರೆದುಕೊಟ್ಟಿದ್ದೇವೆಂದು ಹೇಳಿದರು, ಅದು ಸತ್ಯವಾದಂಥ ಮಾತು, ಆದರೆ ರೈಲ್ವೆ ಇಲಾಖೆಯವರು ಇನ್ನೂ ಎರಡು ತಿಂಗಳು ಕಾಲಾವಧಿ ಬೇಕಾಗುತ್ತದೆ ಅದಕ್ಕಾಗಿ ನಮಗೆ ಅವಕಾಶ ಕೊಡಬೇಕಾಗುತ್ತದೆ ಎಂದು ಈಗಾಗಲೇ ಕೋರ್ಟಿಗೆ ಬರೆದು ಕೇಳಿಕೊಂಡಿದ್ದಾರೆ. ಇವತ್ತೇನೆ ಕೇಂದ್ರ ಸರ್ಕಾರ 43.00 ಕೋಟಿ ರೂಪಾಯಿ ಗಳಷ್ಟು matching grant ಕೊಡುತ್ತದೆ, ಆ 43.00 ಕೋಟಿ ರೂಪಾಯಿಗಳನ್ನು ನಾವೂ ಕೊಡಲಿಕ್ಕೆ ಸಿದ್ಧರಿದ್ದೇವೆ. ಮತ್ತೆ ಡಿ.ಆರ್. ಪಾಟೀಲರು ಮಾತನಾಡಿ ಸಭೆ ನಡೆದಂಥ ಸಂದರ್ಭದಲ್ಲಿ ಈ ವರ್ಷ ಅರ್ಧ ಹಣ ಕೊಡಿ ಮುಂದಿನ ವರ್ಷ ಅರ್ಧ ಹಣ ಕೊಡಿ ಎಂದು ಹೇಳಿದ್ದಾರೆಂದು ತಿಳಿಸಿದರು. 2006–07ನೇ ಸಾಲಿನಲ್ಲಿ ನಾವು ಅರ್ಧ ಹಣವನ್ನು ಕೊಡಲಿಕ್ಕೆ ಸಿದ್ಧರಿದ್ದೇವೆ ಮತ್ತೆ ಮುಂದಿನ

ವರ್ಷ ಅಂದರೆ 2007–08ನೇ ಸಾಲಿನಲ್ಲಿ ಅರ್ಧ ಹಣವನ್ನು ಕೊಡಲಿಕ್ಕೆ ಸಿದ್ಧರಿದ್ದೇವೆ. ಅವರು ಏನು ಸಲಹೆ ಮಾಡಿದರು, file ಗೆ ಕಾಲಿಲ್ಲ, ಅದು ನಡೆದುಕೊಂಡು ಬರುವುದಿಲ್ಲ. ಅದನ್ನು ತರಿಸಬೇಕೆಂದು, ಅದರ ಬಗ್ಗೆ ನಮ್ಮ ಇಲಾಖೆಯ ಅಧಿಕಾರಿಗಳಿಗೆ ಈ ಬಗ್ಗೆ ಸೂಕ್ತ ನಿರ್ದೇಶನವನ್ನು ಕೊಡುತ್ತೇವೆ. ಹಾಗಾಗಿ ಆದಷ್ಟು ಬೇಗ ಮಾಹಿತಿಯನ್ನು ತರಿಸಿ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಸದನಕ್ಕೆ ನಾನು ಹೇಳಬಯಸುತ್ತೇನೆ.

ಶ್ರೀಮತಿ ಭಾಗೀರಥಿ ಟಿ ಮರುಳಸಿದ್ಧನಗೌಡ: ತಮ್ಮ ಕಳಕಳಿ ಏನು ಕೇವಲ ಒಂದೇ ರೈಲ್ವೆಗೆ ಸೀಮಿತವಾಗಿದೆಯೇ ಅಥವಾ ರಾಜ್ಯದಲ್ಲಿ ಉಳದಿರುವಂತಹ ರೈಲ್ವೆಗಳಿಗೆ ಹಣ ಬಿಡುಗಡೆ ಮಾಡುವಿರಾ ಎಂಬುದು ನಮ್ಮ ಪ್ರಶ್ನೆ. ಕೊಟ್ಟೂರು–ಹರಿಹರ ರೈಲ್ವೆಗೆ ರಾಜ್ಯ ಸರ್ಕಾರ ಎಷ್ಟು ಹಣವನ್ನು ಬಿಡುಗಡೆ ಮಾಡಬೇಕಾಗಿದೆ? ಇವತ್ತಿನವರೆಗೂ ಕಾಮಗಾರಿ ಎಲ್ಲಿಗೆ ನಿಂತಿದೆ? ನಾನು ಈ ಬಗ್ಗೆ ಎಷ್ಟು ಪತ್ರಗಳನ್ನು ಸರ್ಕಾರಕ್ಕೆ ಕೊಟ್ಟಿದ್ದೇನೆ? ಎಷ್ಟು ಹಣವನ್ನು ಬಿಡುಗಡೆ ಮಾಡುವಿರಿ ಎಂಬುದರ ಬಗ್ಗೆ ರಾಜ್ಯಸರ್ಕಾರಕ್ಕಿರುವ ಕಳಕಳಿಯನ್ನು ನನ್ನ ಕ್ಷೇತ್ರದ ರೈಲ್ವೆ ಕೆಲಸಕ್ಕೂ ಸಹ ನೀಡಬೇಕೆಂದು ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಗೋವಿಂದ ಕಾರಜೋಳ: ಸನ್ಮಾನ್ಯ ಅಧ್ಯಕ್ಷರೇ, ಶ್ರೀಮತಿ ಭಾಗೀರಥಮ್ಮನವರು ಪ್ರತ್ಯೇಕ ಪ್ರಶ್ನೆ ಹಾಕುತ್ತಿದ್ದಾರೆ. ಏಕೆಂದರೆ, ಆ ಮಾಹಿತಿ ನನ್ನ ಹತ್ತಿರ ಇಲ್ಲ. ದಯವಿಟ್ಟು, ಅವರು ಮತ್ತು ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ, ಸರ್ಕಾರ ಉತ್ತರ ಕೊಡಲಿಕ್ಕೆ ಸಿದ್ದವಿದೆ. ಸರ್ಕಾರಕ್ಕೆ ಎಲ್ಲಾ ಯೋಜನೆಗಳ ಬಗ್ಗೆಯೂ ಕಳಕಳಿ ಇದೆ.

ಶ್ರೀ ಡಿ.ಆರ್. ಪಾಟೀಲ್: 1993–94ರೊಳಗೆ ಈ ಯೋಜನೆ ಪ್ರಾರಂಭವಾದದ್ದು. 1994 ರಿಂದ 1999ರ ವರೆಗೆ, ತಾವೇನು ಶಾಸಕರಾಗಿದ್ದಿರಿ, ಅದೇ ಸರ್ಕಾರ ಅಧಿಕಾರದಲ್ಲಿತ್ತು. 1999ರ ನಂತರ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂತು. ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾದ ಮೇಲೆ ಆ ಕೇರಾಯಿಡ್ ಅನ್ನು, ಈ ರೈಲ್ವೆ ಯೋಜನೆಗಳ ಸಲುವಾಗಿ ಆ ಸಂಸ್ಥೆಯನ್ನು ಹುಟ್ಟುಹಾಕಿ ನಾಲ್ಕು ರೈಲ್ವೆ ಮಾರ್ಗಗಳನ್ನು ಅನುಷ್ಠಾನ ಗೊಳಿಸುವುದಕ್ಕೆ ಹಣ ಬಿಡುಗಡೆ ಮಾಡುತ್ತಾ ಬಂದರು. ಇದು ವಾಸ್ತವಿಕ ಸ್ಥಿತಿ. ಅದಕ್ಕೆ, ನಮ್ಮ ಕಳಕಳಿ ಕಡಿಮೆ ಇದೆಯೆಂದು ತಾವು ದಯವಿಟ್ಟು ಭಾವನೆ ಮಾಡಬಾರದು.

ಶ್ರೀ ಗೋವಿಂದ ಕಾರಜೋಳ: 178 ಕೋಟಿ ರೂಪಾಯಿಗಳ ಯೋಜನೆಗೆ ಎಷ್ಟು ವರ್ಷ ಬೇಕಾಗುತ್ತದೆ. 1989 ರಿಂದ 2005 ಡಿಸೆಂಬರ್ ವರೆಗೂ ಅವರದ್ದೇ ಸರ್ಕಾರ ಇತ್ತು, ಏಕೆ ಮಾಡಲಿಲ್ಲ?

(ಆ) ವಿಷಯ: ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು ದೊಡ್ಡಕೌಲಂದೆ ಹಾಗೂ ಇತರೆ 54 ಗ್ರಾಮಗಳಿಗೆ ಕಪಿಲಾ ನದಿ ಮೂಲದಿಂದ ಕುಡಿಯುವ ನೀರಿನ ಯೋಜನೆಗೆ ಹಣ ಬಿಡುಗಡೆ ಮಾಡದಿರುವ ಬಗ್ಗೆ.

ಶ್ರೀ ಆರ್. ಧ್ರುವನಾರಾಯಣ್ (ಸಂತೇಮಾರನಹಳ್ಳಿ): ಸನ್ಮಾನ್ಯ ಅಧ್ಯಕ್ಷರೇ, ನಂಜನಗೂಡು ತಾಲ್ಲೂಕು, ದೊಡ್ಡಕೌಲಂದೆ ಹೋಬಳಿಗೆ ಸೇರಿದಂಥ 54 ಹಳ್ಳಿಗಳಿಗೆ ಶಾಶ್ವತ ಕುಡಿಯುವ ನೀರಿನ ಯೋಜನೆಗೆ ಹಣ ಬಿಡುಗಡೆ ಮಾಡದಿರುವ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್(ಕಂದಾಯ ಸಚಿವರು)(ಮಾನ್ಯ ಉಪ ಮುಖ್ಯಮಂತ್ರಿಗಳ ಪರವಾಗಿ): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಧ್ರುವನಾರಾಯಣ್ ರವರು ಗಮನ ಸೆಳೆಯುವ ಸೂಚನೆಗೆ ಈ ಕೆಳಕಂಡ ಉತ್ತರವನ್ನು ನೀಡುತ್ತೇನೆ.

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ದೊಡ್ಡಕೌಲಂದೆ ಹಾಗೂ ಇತರ 54 ಗ್ರಾಮಗಳಿಗೆ ಕಪಿಲಾ ನದಿ ಮೂಲದಿಂದ ಕುಡಿಯುವ ನೀರಿನ ಯೋಜನೆಯನ್ನು ರೂ. 14.60 ಕೋಟಿ ಅಂದಾಜು ವೆಚ್ಚದಲ್ಲಿ ಅನುಷ್ಠಾನಗೊಳಿಸಲು ರೂಪಿಸಿರುವ ಯೋಜನೆ ಬಗ್ಗೆ ಕರಡು ಸಚಿವ ಸಂಪುಟ ಟಿಪ್ಪಣಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಸಿದ್ದಪಡಿಸಿ ಆರ್ಥಿಕ ಇಲಾಖೆಯ ಅಭಿಪ್ರಾಯ/ಸಹಮತಿಗೆ ಪ್ರಸ್ತಾವನೆಯನ್ನೊಳಗೊಂಡ ಕಡತ ಸಲ್ಲಿಸಲಾಗಿರುತ್ತದೆ. ಈ ಬಗ್ಗೆ ಆರ್ಥಿಕ ಇಲಾಖೆಯಲ್ಲಿ ಪರಿಶೀಲನೆ ಮಾಡಿ ಇದಕ್ಕೆ ಸಹಮತಿ ನೀಡುವ ಸಲುವಾಗಿ, ಯೋಜನಾ ವೆಚ್ಚವನ್ನು ಯಾವ ಮೂಲದಿಂದ ಭರಿಸಲಾಗುವುದು? ಅನುದಾನವನ್ನು ಯಾವ ರೀತಿಯಲ್ಲಿ ಒದಗಿಸಿಕೊಳ್ಳಲಾಗುವುದು? ಯೋಜನೆಯ ಅನುಷ್ಠಾನದ ನಂತರ ಅದರ ಕಾರ್ಯಾಚರಣೆ ಹಾಗೂ ನಿರ್ವಹಣೆಗಾಗಿ ಯೋಜಿಸಿರುವ ವ್ಯವಸ್ಥೆ ಏನು? ಇತ್ಯಾದಿಗಳ ಬಗ್ಗೆ ಹೆಚ್ಚುವರಿ ಮಾಹಿತಿಯನ್ನು ಒದಗಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಕೋರಿದ್ದು, ಮಾಹಿತಿಗಳನ್ನು 23.6.2006ರಂದು ನೀಡಲಾಗಿರುತ್ತದೆ. ಈ ಮಾಹಿತಿಗಳನ್ನಾಧರಿಸಿ ಪ್ರಸ್ತಾವನೆಗೆ ಸಹಮತಿ ನೀಡುವ ಬಗ್ಗೆ ಆರ್ಥಿಕ